ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 10-15
©*IIMRD*, Mysuru
IIMRD JOURNALS
www.iimrd.com

# 'ಅಪ್ರತಿಮವೀರಚರಿತೆ' – ಚಾರಿತ್ರಿಕ ಅಂಶಗಳು

**ವತ್ಸಲ ಎನ್**
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಾರಾಂಶ: (Abstract)**

*ವಿಜಯನಗರ ಸಾಮ್ರಾಜ್ಯದ ನಂತರ ಅಂದರೆ ರಾಜ ಮನೆತನದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಶಾಸನಗಳ ಜೊತೆಗೆ ಕನ್ನಡ ಸಾಹಿತ್ಯ ಕೃತಿಗಳು ಸಹ ಪ್ರಮುಖವಾದ ಆಧಾರ ಗ್ರಂಥಗಳಾಗಿವೆ. ಅಂತಹ ಪ್ರಮುಖ ಕೃತಿಗಳಲ್ಲಿ ಈ ಅಲಂಕಾರ ಕೃತಿಗಳು ಸಹ ಒಂದಾಗಿವೆ. 18ನೆಯ ಶತಮಾನ ಉತ್ತರ ಭಾಗದಲ್ಲಿ ಮೈಸೂರು ರಾಜ್ಯಾಡಳಿತವು ಬಹು ಪ್ರಮುಖವಾದ ಪಾತ್ರವಹಿಸಿದೆ. ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಕಲೆ, ಚಿತ್ರಕಲೆ, ಸಂಗೀತ, ನೃತ್ಯ ಮೊದಲಾದ ಲಲಿತ ಕಲೆಗಳಿಗೆ ಕೊಟ್ಟ ಪ್ರೋತ್ಸಾಹವು ಗಣನೀಯವಾಗಿದೆ. ಒಡೆಯರ ಕಾಲದಲ್ಲಿ ರಚಿತವಾದ ಗ್ರಂಥಗಳಲ್ಲಿ ಕಂಡು ಬರುವ ವಿಷಯಗಳಿಂದ ಮಾತ್ರ ಅವರು ಸಾಹಿತ್ಯದಾಚೆಗೂ ಲಲಿತ ಕಲೆಗಳಿಗೆ ಕೊಟ್ಟ ಪ್ರೋತ್ಸಾಹಗಳನ್ನು ತಿಳಿಯಬಹುದು. ಇವರುಗಳಲ್ಲಿ ಚಿಕ್ಕದೇವರಾಜ ಸಂಗೀತ ವಿದ್ವಾಂಸನಾಗಿದ್ದರು ಎಂಬ ವಿಷಯವನ್ನು ಇವರ ಅಸ್ಥಾನ ಕವಿಯಾಗಿದ್ದ ತಿರುಮಲಾರ್ಯನ ಕೃತಿಗಳಿಂದ ತಿಳಿಯುತ್ತದೆ. ಪ್ರಸ್ತುತ ಲೇಖನದಲ್ಲಿ ತಿರುಮಲಾರ್ಯನು ಬರೆದಿರುವ 'ಅಪ್ರತಿಮವೀರಚರಿತೆ' ಕೃತಿಯಲ್ಲಿನ ಚಾರಿತ್ರಿಕ ಅಂಶಗಳನ್ನು ದಾಖಲಿಸಲಾಗಿದೆ.*

**ಮುಖ್ಯಪದಗಳು (Keywords):** ಮೈಸೂರು ಅರಸರು, ಚಿಕ್ಕದೇವರಾಜ ಒಡೆಯರ್, ತಿರುಮಲಾರ್ಯ, ಅಪ್ರತಿಮವೀರಚರಿತೆ.

**ಪೀಠಿಕೆ**

ಸಂಗೀತದ ಬೆಳವಣಿಗೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪಾತ್ರವು ಪ್ರಮುಖವಾದದು. ಸಂಗೀತದ ಜೊತೆಗೆ ಸಾಹಿತ್ಯಕ್ಕೂ ಅಪರಿಮಿತವಾದ ಮಹತ್ವವನ್ನು ಕೊಟ್ಟಿರುವುದನ್ನು ನೋಡಬಹುದು. ಇವರ ಕಾಲದಲ್ಲಿ ಇದ್ದಂತಹ ಕವಿಗಳು ಅಪ್ರತಿಮವೀರ ಚರಿತೆ ರಚಿತ ತಿರುಮಲಾರ್ಯರು ಹಾಗೂ ನರಪತಿಚರಿತೆಯನ್ನು ಬರೆದಂತಹ ಲಿಂಗರಾಜನ ಗ್ರಂಥವು ಮೇಲು ನೋಟಕ್ಕೆ ಚಾರಿತ್ರಿಕವಾದಂತಹ ಗ್ರಂಥ ಎಂದು ಭಾವಿಸುತ್ತವೆ. ಆದರೆ ಚರಿತ್ರೆಯನ್ನು ಕಾವ್ಯಾತ್ಮಕವಾಗಿ ಹಾಗೂ ಕಲಾತ್ಮಕವಾಗಿ ಹೇಳಿರುವಂತಹವು ಅಲಂಕಾರ ಗ್ರಂಥಗಳಾಗಿವೆ. ಈ ಗ್ರಂಥವು ಕೇವಲ ಅಲಂಕಾರಕ್ಕೆ ಅಷ್ಟೇ ಪ್ರಾಮುಖ್ಯತೆಯನ್ನು ಕೊಡಲಿಲ್ಲ ಅಲಂಕರಾತ್ಮಕವಾಗಿ ತಮ್ಮ ನಾಡಿನ ಚರಿತ್ರೆ ತಮ್ಮ ಪ್ರಾದೇಶಿಕ ಚರಿತ್ರೆ ಹಾಗೂ ತಮ್ಮ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಲಕ್ಷ್ಯ ಪದ್ಯಗಳನ್ನು ಕಾವ್ಯಾತ್ಮಕವಾಗಿ ಚರಿತ್ರೆ ಮೂಲಕ ಕಟ್ಟಿಕೊಡುವಂತಹ ಪ್ರಯತ್ನವನ್ನು ಈ

*Please cite this article as:* ವತ್ಸಲ ಎನ್. (2025). 'ಅಪ್ರತಿಮವೀರಚರಿತೆ' – ಚಾರಿತ್ರಿಕ ಅಂಶಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 10–15

ಗ್ರಂಥದಲ್ಲಿ ಮಾಡಿದ್ದಾರೆ. ಇಲ್ಲಿ ಬಹುಮುಖ್ಯವಾಗಿ ಅಲಂಕಾರಿಕ ಕೃತಿಗಳು ಕೇವಲ ಶಾಸ್ತ್ರಕ್ಕೆ ಅಷ್ಟೇ ಸೀಮಿತವಾಗಿರದೇ ಚಾರಿತ್ರಿಕವಾಗಿ ಚರಿತ್ರೆಯನ್ನು ಹೇಳುತ್ತವೆ ಎಂಬ ಅಂಶವನ್ನಿಟ್ಟುಕೊಂಡು ಚರ್ಚಿಸಲಾಗುತ್ತದೆ.

**'**ಅಪ್ರತಿಮವೀರಚರಿತೆ**'** ಎಂಬ ನಾಮಕರಣವು ಅಲಂಕಾರಶಾಸ್ತ್ರ ಗ್ರಂಥಕ್ಕೆ ಆಶ್ಚರ್ಯವೆನಿಸಬಹುದಾದರೂ ಅದರಲ್ಲಿಯ ಉದಾಹರಣೆಯ ಪದ್ಯಗಳೆಲ್ಲವೂ ಅಪ್ರತಿಮವೀರನೆಂಬ ಬಿರುದು ಹೊಂದಿದ ಚಿಕ್ಕದೇವರಾಜನ ವೀರ ಚರಿತೆಯನ್ನು ವರ್ಣಿಸುವುದರಿಂದ ಈ ಹೆಸರು ಸೂಕ್ತವಾಗಿದೆ ಎಂದು ಹೇಳಬಹುದು. ಸಂಸ್ಕೃತ ಅಲಂಕಾರಶಾಸ್ತ್ರದ ಪರಂಪರೆಯಲ್ಲಿಯೂ ಸಹ ಇಂಥ ಪದ್ಧತಿ ಇದ್ದಿರಬಹುದು. ಅದೇ ತಿರುಮಲಾರ್ಯನು ಅನುಸರಿಸಿರಬಹುದು ಎಂದು ಊಹಿಸಬಹುದು. ಕವಿಯು ಈ ಗ್ರಂಥದ ಲಕ್ಷ್ಯಪದ್ಯಗಳಲ್ಲಿ ಚಿಕ್ಕದೇವರಾಜನ ಶೌರ್ಯ, ಔದಾರ್ಯ, ರಸಿಕತೆ ಮೊದಲಾದ ಗುಣಗಳ ಪ್ರಶಂಸೆಯನ್ನು ವಿವರಿಸಿರುವನು. ಈ ಗ್ರಂಥದಲ್ಲಿ ಹೇಳಿದ ಚಾರಿತ್ರಿಕ ಅಂಶಗಳನ್ನು ಪ್ರತ್ಯೇಕಿಸಿ ನೋಡಿದರೆ ಇದು ಒಂದು ಇತಿಹಾಸ ಕಾವ್ಯವಾಗಿ ಕಂಡು ಬರುತ್ತದೆ.

ತಿರುಮಲಾರ್ಯನು ತನ್ನ ಗ್ರಂಥದ ಉದ್ದಕ್ಕೂ ಅಪ್ರತಿಮವೀರ ಎಂಬ ಬಿರುದು ಹೊಂದಿದ ತನ್ನ ಆಶ್ರಯದಾತ ಚಿಕ್ಕದೇವರಾಜನನ್ನು ಹೊಗಳುವ ಲಕ್ಷ್ಯ ಪದ್ಯಗಳನ್ನು ಮಾತ್ರ ಕನ್ನಡದಲ್ಲಿ ಸುಂದರವಾಗಿ ಕಂದ ವೃತ್ತಗಳಲ್ಲಿ ರಚಿಸಿರುವನು. ತಿರುಮಲಾರ್ಯನಿಗೆ ಚಿಕ್ಕದೇವರಾಜನು ಅಪ್ರತಿಮವೀರನಾಗಿ ಕಾಣಿಸಿಕೊಂಡಿರಬಹುದು ಹಾಗಾಗಿ ಅಪ್ರತಿಮವೀರಚರಿತೆ ಎಂಬ ಅಲಂಕಾರ ಗ್ರಂಥವನ್ನು ರಚಿಸಿರುವನು.

**"**ಚಿಕ್ಕದೇವರಾಯನ ರಾಜ್ಯದ ಪರಿತಃ ಪ್ರದೇಶಗಳಿಗೆ ಒಡೆಯರಾದ ಕೆಳದಿಯ ಚನ್ನಬಸವರಾಜ ಮರಾಠರು ವಿಜಾಪುರದರಸರೊಡನೆ ಚಿಕ್ಕದೇವರಾಜನು ನಡೆಸಿದ ಹೋರಾಟಗಳನ್ನು ತಿಳಿಸುವನು. ಅಪ್ರತಿಮವೀರ ಚರಿತೆಯು ಅಲಂಕಾರ ಗ್ರಂಥವಾಗಿದ್ದರೂ ಆಗಿನ ಕಾಲದ ರಾಜಕೀಯ ಕೆಲವು ಸಂಗತಿಗಳನ್ನು ಬೆಳಕಿಗೆ ತರುವುದು**"**.[1]

ಮೈಸೂರು ಸಂಸ್ಥಾನವು ದೇಶದ ರಕ್ಷಣೆಗಾಗಿಯು ಹಾಗೂ ದಿಗ್ವಿಜಯಕ್ಕಾಗಿಯು ಸರಿಯಾದ ಸೈನ್ಯವನ್ನು ಕಟ್ಟುವುದಕ್ಕಾಗಿ ಅನೇಕ ಹೊಸಬಗೆಯ ಕರಗಳನ್ನು ಹೇರಿ ದೇಶದ ಉನ್ನತಿಯನ್ನು ಹೆಚ್ಚಿಸಿಕೊಂಡಿರುವ ಉಲ್ಲೇಖಗಳಿವೆ. ಬೆಂಗಳೂರು, ಹೊಸಕೋಟೆ, ಬಾರಾಮಹಲ್, ಹಾಸನ, ಬಣಾವರ, ಚಿಕ್ಕಮಗಳೂರು, ಬಿದನೂರು ಎಲ್ಲವನ್ನು ಚಿಕ್ಕದೇವರಾಯನು ಮೈಸೂರಿಗೆ ಅಳವಡಿಸಿಕೊಂಡು ಮೊಘಲರು ಇನ್ನೂ ಚಕ್ರವರ್ತಿಗಳಾದುದರಿಂದ 1699ರಲ್ಲಿ ಔರಂಗಜೇಬನ ಆಸ್ಥಾನ ಅಂದರೆ ಅಹಮ್ಮದ್ ನಗರಕ್ಕೆ ಕಪ್ಪಕಾಣಿಕೆಗಳೊಡನೆ ರಾಯಭಾರಿಯನ್ನು ಕಳುಹಿಸಿರುವ ಉಲ್ಲೇಖಗಳಿವೆ. ಈ ರೀತಿಯಾದ ಅಪ್ರತಿಮವೀರ ಹಾಗೂ ಅವನ ಪರಾಕ್ರಮವನ್ನು ಅಪ್ರತಿಮವೀರ ಚರಿತೆಯಲ್ಲಿ ತಿರುಮಲಾರ್ಯನು ಪ್ರತಿಪಾದಿಸಿರುವನು.

ತಿರುಮಲಾರ್ಯನು ಅಲಂಕಾರಗಳನ್ನು ಹೇಳುವ ಲಕ್ಷ್ಯ ಪದ್ಯಗಳಲ್ಲಿ ತನ್ನ ಅರಸನನ್ನು ವರ್ಣಿಸಿರುವನು. ವರ್ಣಿಸುವ ವಸ್ತುವಿನಲ್ಲಿ ಇದೋ ಅದೋ ಎಂದು ಸಂದೇಹವನ್ನುಂಟು ಮಾಡುವುದಕ್ಕೆ

ಸಂದೇಹಾಲಂಕಾರವಾಗುತ್ತದೆ. ಕವಿಯು ಇಲ್ಲಿ ಸಂದೇಹಾಲಂಕಾರದಲ್ಲಿ ಕವಿಯ ಪರಾಕ್ರಮವನ್ನು ಹೇಳಿರುವ ಪದ್ಯ ಹೀಗಿದೆ.

***"ಮಯನೋ ಶಂಬರನೋ ದುಶಾಸ್ಯಸುತನೋ ಮಾರೀಚನೋ ಎಂಬನಂ***
***ಭಯದಿಂದಾಗರೆಡಿಲ್ಲಿ ಭಾವನಗರಪ್ರಾಂತಂಗಳೊಳ್ ಶ್ಚಾಡುಗರ್***
***ಜಯಜೀಯೆಂದಿದಿರಿಟ್ಟ ಕಪ್ಪದೊದವಿಂ ಪೆಂಪೇಱಿಬಂದಾಶಿವಾ***
***ಜಿಯಸೊರ್ಕ್ಸಂ ಮುಟಿದಿಕ್ಕಿಯಪ್ರತಿಮವೀರಾಭಿಖ್ಯೆಯಂ ತಾಳ್ದಿದಂ"*** (ಅ.ವೀ.ಚ. 3–28)

ಅಂದರೆ ಡಿಲ್ಲಿಯಿಂದ ಹೈದರಾಬಾದು ಮುಂತಾದ ಪ್ರಾಂತ್ಯದ ಜನರೆಲ್ಲ ಇವನೇನು 'ಮಯನೋ', 'ಶಂಬರನೋ', 'ಮಾರೀಚನೋ' ಎಂದು ಜೀಯ ಜೀಯ ಎಂದು ಕಪ್ಪಕಾಣಿಕೆಗಳನ್ನು ಕೊಡಲು ಆ ಜಯದಿಂದ ಮದವೇರಿ ಬಂದ ಶಿವಾಜಿಯ ದರ್ಪವನ್ನು ಚಿಕ್ಕದೇವರಾಜನು ಹೋರಾಡಿ ಅವನನ್ನು ಅಡಗಿಸಿರುವ ಉಲ್ಲೇಖವನ್ನು ನೋಡಬಹುದು.

***"ಡಿಲ್ಲಿಯ ಬಾಗಿಲೊಳ್ ಪರಿದು ಕೊಳ್ಳೆಯಕೊಂಡುರೆ ಗೋಲಕೊಂಡೆಯಂ***
***ಜಳ್ಳಿಸಿಯೊಕ್ಕಲಿಕ್ಕಿ ವಿಜಯಾಪ್ರರಮಂ ಬಱಿಗೈದ ಸೊರ್ಕಿನಿಂ***
***ದಳ್ಳಱಿವಾ ಶಿವಾಜಿಸುತಶಂಭುಜಿಯೇಳ್ಗೆಯನುರ್ಬುಕೊರ್ಬುಮಂ***
***ತೆಳ್ಳನೆ ಗೆಯ್ದನದ್ಭುತ ಪರಾಕ್ರಮದಿಂ ಚಿಕ್ಕದೇವಭೂವರಂ"***[2]

ಅಂದರೆ ಮುಂದೆ ಅದೇ ಕೊಬ್ಬಿನಿಂದ ಶಿವಾಜಿಯ ಮಗನಾದ ಶಂಭುಜಿಯು ಗೋಲ್ಕಂಡ ಬಿಜಾಪುರಗಳನ್ನು ಲೂಟಿಗೈದ ಸೊಕ್ಕನ್ನು ಅಪ್ರತಿಮವೀರನಾದ ಚಿಕ್ಕದೇವಾಭೂಪಾಲನು ತನ್ನ ಪರಾಕ್ರಮದಿಂದ ತಣ್ಣಗೆ ಮಾಡಿರುವ ಪ್ರಸಂಗವನ್ನು ನೋಡಲಾಗಿದೆ.

ಚಿಕ್ಕದೇವರಾಯನ ಪರಾಕ್ರಮವನ್ನು ಕವಿಯು ಸಾತ್ವತೀ ವೃತ್ತಿಯಲ್ಲಿ ಭಯಾನಕ ಸಂದರ್ಭಕ್ಕೆ ಕೊಟ್ಟ ಉದಾಹರಣೆಯಲ್ಲಿ ವರ್ಣಿಸಿರುವನು.

***"ದೇವ ನಿನ್ನ ದಾಟಿಯೊಳ್ ಮಾರಾಟಿಗಳ್ ಬಿಗರ್ಪಿನಿಂ***
***ರಾವು ರಾವು ಜೀವು ಜೀವು ಗಾವು ಮೀ ತುಝಾ ಘರೇ***
***ದೇವು ದೇವು ಚಾರು ಪಾಯಿ ದೋನುಸಿಂಗ ಭೇವುಭೇವ್***
***ಜೀವು ರಾವು ವೆಂಬರಳ್ಕಿ ಚಿಕದೇವರಾಯ ಕೇಳ್"*** (ಅ.ವೀ.ಚ. 2–16)

ಅಂದರೆ ದೇವ ನಿನ್ನ ದಾಳಿಯಲ್ಲಿ ಮರಾಠಿಗರು ಹೆದರಿಕೆಯಿಂದ ರಾಯನೇ ರಾಯನೇ ಜೀವ ಸಹಿತ ಉಳಿಸು ಉಳಿಸು ನಮಗೆ ಹಸುಗಳ ಹಾಗೆ ನಾಲ್ಕು ಕಾಲು ಎರಡು ಕೊಂಬುಗಳನ್ನು ಕೊಡು ಕೊಟ್ಟು ದಯೆತೋರು ಕಾಪಾಡು ರಾಯನೇ ಎಂದು ಚಿಕ್ಕದೇವರಾಯನು ಆಸ್ಥಾನದಲ್ಲಿ ಹಸುಗಳಂತೆ ಸೇವೆ ಮಾಡುತ್ತೇವೆ ಎಂದು ಹೆದರಿಕೊಂಡು ಶತ್ರುಗಳು ಚಿಕ್ಕದೇವರಾಯನನ್ನು ಬೇಡಿಕೊಂಡಿರುವ ಪ್ರಸಂಗವನ್ನು ನೋಡಲಾಗಿದೆ.

ತಿರುಮಲಾರ್ಯನು ಚಿಕ್ಕದೇವರಾಯನ ಗುಣಕಥನ ಮಾಡುವಾಗ ಆತನ ಪರಾಕ್ರಮ ವರ್ಣನೆಗೆ ಪ್ರಾಧಾನ್ಯತೆ ಕೊಟ್ಟಿರುವನು.

***"ಕಟ್ಟಿದ ದಟ್ಟಿ ಕೈದಳೆದ ಪೊಂಗಿರುಗಟ್ಟಿಗೆ ರನ್ನಬಂದಿಗೋ***

***ಲ್ ಒಟ್ಟಿತೆನಿಪ್ಪ ಚೊಲ್ಲೆಯದ ಮಟ್ಟಿಯ, ಸೀಸಕ ಮಿಟ್ಟಿನಾಮದ ಒಳ್***

***ಒಟ್ಟು ಮನಂಗೋಗಳಲ್ ಗರುಡಿಗೆಯ್ಮೆಯೊಳ್ ಈ ಚಿಕ್ಕದೇವರಾಯನಂ***

***ನಿಟ್ಟಿಪ ಜಟ್ಟಿಗಳ್ ಗರುಡಿಗೋವಳಂ ಈ ನೃಪಂ ಎಂದು ವಂದಿಪರ್"*** [3]

ಔರಂಗಜೇಬನು ಚಿಕ್ಕದೇವರಾಯನಿಗೆ ಜಗದೇವರಾಯನೆಂಬ ಬಿರುದನ್ನು ದಂತದ ಸಿಂಹಾಸನವನ್ನು ಕಳುಹಿಸಿದನು ಎಂಬ ಉಲ್ಲೇಖಗಳಿವೆ.

**"**ಚಿಕ್ಕದೇವರಾಯನು ಶತ್ರುಗಳ ದಾಳಿಯನ್ನು ತಪ್ಪಿಸಿಕೊಂಡು ತನ್ನ ದೃಷ್ಟಿಯನ್ನು ರಾಜ್ಯದ ಅಭಿವೃದ್ಧಿಯ ಕಡೆಗೆ ತಿರುಗಿಸಿದನು. ತೆರಿಗೆ, ಕಂದಾಯ ಸರಿಯಾಗಿ ವಸೂಲಾತಿ ಭಂಡಾರ ಯಾವಾಗಲೂ ಭರ್ತಿಯಾಗಬೇಕಾಗಿತ್ತು. ಎಲ್ಲ ಜಿಲ್ಲೆಗಳಿಂದಲೂ ಜಯಿಸಲ್ಪಟ್ಟ ರಾಜ್ಯಗಳಿಂದಲೂ ನಿಗದಿಯಾದ ಹಣ ಬರುವವರೆಗೆ ರಾಜನು ಊಟ ಮಾಡುತ್ತಿರಲಿಲ್ಲ. ಪ್ರತಿದಿನ ಎರಡು ಸಾವಿರ ಚಿನ್ನದ ಪಗೋಡ ಖಜಾನೆಗೆ ಬರುತ್ತಿದ್ದಿತು. ಭಂಡಾರ ಯಾವಾಗಲೂ ತುಂಬಿರುತ್ತಿದ್ದುದರಿಂದ ಚಿಕ್ಕದೇವರಾಯನಿಗೆ ನವಕೋಟಿನಾರಾಯಣವೆಂಬ ಬಿರುದು ಬಂದಿತ್ತು. ಚಿಕ್ಕದೇವರಾಯನು ರಾಜ್ಯದ ಆಡಳಿತಕ್ಕೆ ಹದಿನೆಂಟು ಇಲಾಖೆಗಳನ್ನು ಸ್ಥಾಪಿಸಿದನು**"**.[4] ಎಂಬ ರಾಜಕೀಯ ಇತಿಹಾಸ ಉಲ್ಲೇಖಗಳನ್ನು ನೋಡಬಹುದು.

ಚಿಕ್ಕದೇವರಾಯನ ಕಾಲದಲ್ಲಿ ಮೈಸೂರು ಸಂಸ್ಥಾನವು ತುಂಬಾ ವಿಸ್ತಾರದಿಂದ ಕೂಡಿರುವುದನ್ನು ನೋಡಬಹುದು. "ಒಂದು ಶಾಸನದಲ್ಲಿ ಚಿಕ್ಕದೇವರಾಯ ಕರ್ನಾಟಕ ಸಿಂಹಾಸನದಲ್ಲಿ ಇಂದ್ರನಂತೆ ವಿರಾಜಿಸುತ್ತಿದ್ದನೆಂದು ಹೇಳಿದೆ. ಅವನು ತಿರುಚಿನಪಲ್ಲಿಯವರೆಗೆ ದಂಡೆತ್ತಿ ಹೋದನು. ನಾಶವಾದ ವಿಜಯನಗರ ಸಾಮ್ರಾಜ್ಯದ ಅನೇಕ ಸಾಮಂತರನ್ನೆಲ್ಲ ಜಯಿಸಿದನು. ಒಂದು ಶಾಸನದಲ್ಲಿ ಹೀಗೆ ಹೇಳಿದೆ. **"**ಚಿಕ್ಕದೇವರಾಯನು ಮದುರೈ ನಾಯಕನನ್ನು ಸೋಲಿಸಿದನು. ಆಗ್ರಾ, ಡಿಲ್ಲಿ, ಹೈದರಾಬಾದು ಮುಂತಾದಡೆಗಳೆಲ್ಲ ಶತ್ರುಗಳು ಶಿವಾಜಿಯ ಎದುರಿಗೆ ನಿಲ್ಲಲಾರದೆ ಪಲಾಯನಗೈಯುತ್ತಿರುವವಾಗ ಇವನು ಶಿವಾಜಿಯನ್ನು ಎದುರಿಸಿ ಹಿಮ್ಮೆಟ್ಟಿಸಿದನು**"**.[5] ಈ ರೀತಿಯಾಗಿ ತಿರುಮಾಲರ್ಯನು ತನ್ನ ಮಾವನಾದ ಚಿಕ್ಕದೇವರಾಯನ ಗುಣಕಥನವನ್ನು ಹಾಗೂ ಶೌರ್ಯ ಸಾಹಸಗಳನ್ನು ವರ್ಣಿಸಿರುವನು.

***"ಒಂದುಕಡೆಯೊಳ್ ತುರುಕರೊಂದುಕಡೆಯೊಳ್ ಮರಸ***

***ರೊಂದೆಡೆಯೊಳಾರೆಯರ ಬೃಂದಮಳಮಿಂ ಬೇ***

***ಱೊಂದು ಬಳಿಯೊಳ್ ತಿಗುಳರೊಂದಿರವಿನೊಳ್ ಕೊಡಗ***

***ರೊಂದು ಕೆಲದೊಳ್ ಮಲೆಯರೊಂದುವರೆದೆಲ್ಲರ್" (ಅ.ವೀ.ಚ. 1–20)***

***"ಸಂದಣಿಸಿ ಕಾಳೆಗಕೆ ಮುಂದುವರಿವನ್ನಮದಟಿಂ***

***ದವರ ತಟ್ಟುಗಳ ಪಂದಲೆಗಳಿಂ ದಿ***

*ಗ್ಘಂದ ಬಲೆಯಿತ್ತು ಗೆಲವಿಂದೆ ಚಿಕದೇವನೃಪನಂದು*
*ಮಿಗೆ ಪೆರ್ಜಸಮನೊಂದಿ ಸೊಗವಾಳ್ದಂ"* (ಅ.ವೀ.ಚ. 1–21)

ಇಲ್ಲಿ ಕವಿಯು ಚಿಕ್ಕದೇವರಾಯನ ಸಾಮರ್ಥ್ಯ, ಅವನ ಸೈನ್ಯ ಪರಾಕ್ರಮವನ್ನು ಕುರಿತು ವರ್ಣಿಸಿರುವನು. ಒಂದು ಕಡೆ, ಎಡೆ ಮುಂತಾದ ವ್ಯಂಜನಗಳ ಪುನಾರವರ್ತನೆಯಾಗಿ ಬಂದಿರುವುದರಿಂದ ಇದು ಅನುಪ್ರಾಸಲಂಕಾರವಾಗುತ್ತದೆ. ಕವಿಯು ಅನುಪ್ರಾಸ ಅಲಂಕಾರಕ್ಕೆ ಚಿಕ್ಕದೇವರಾಯನ ಕುರಿತು ಲಕ್ಷ್ಯ ಪದ್ಯಗಳಲ್ಲಿ ವರ್ಣನೆ ಮಾಡಿರುವನು.

"ಚಿಕ್ಕದೇವರಾಜ ಒಡೆಯರ ಕ್ರಿ.ಶ. 17ನೆಯ ಶತಮಾನ ಆಸ್ಥಾನ ಪಂಡಿತನಾದ ತಿರುಮಲಾರ್ಯನ ಲಕ್ಷಣಗ್ರಂಥ ಅಪ್ರತಿಮವೀರ ಚರಿತದಲ್ಲಿ, ವಿದ್ಯಾನಾಥನ ಪ್ರತಾಪರುದ್ರೀಯದಲ್ಲಿ ಅರಸನನ್ನು ಹೊಗಳುವ ಪದ್ಯಗಳನ್ನು ಮಾತ್ರವೇ ಲಕ್ಷಣಗ್ರಂಥದುದ್ದಕ್ಕೂ ಉದಾಹರಿಸಿದಂತೆ ಇಲ್ಲಿ ತಿರುಮಲಾರ್ಯನು ಅಪ್ರತಿಮನಾದ ಚಿಕ್ಕದೇವರಾಜನನ್ನು ಲಕ್ಷ್ಯ ಪದ್ಯಗಳಲ್ಲೇ ಸ್ತುತಿಸಿದ್ದಾನೆ. ಕಾವ್ಯತತ್ತ್ವದ ಮೀಮಾಂಸೆಗಿಂತಲೂ ಕೃತಿಯ ಲಕ್ಷ್ಯಗಳ ಸಂಯೋಜನೆಯೇ ಗ್ರಂಥಕರ್ತನ ಮುಖ್ಯ ಉದ್ದೇಶವಾಗಿ ಬಿಡುವುದು ಇಂತಹ ಕೃತಿಗಳು ಅನಿವಾರ್ಯ, ಮಮ್ಮಟ, ವಾಮನ, ವಿದ್ಯಾನಾಥ ಮುಂತಾದವರು ಸಂಸ್ಕೃತ ಮೂಲ ಸೂತ್ರಗಳನ್ನೆಲ್ಲ ಗ್ರಂಥದಲ್ಲಿ ಎತ್ತಿಕೊಂಡು ಕನ್ನಡದಲ್ಲಿ ಅವುಗಳ ವಿವರಣೆ ಮತ್ತು ಲಕ್ಷ್ಯಗಳನ್ನು ತಿರುಮಲಾರ್ಯನು ಸೇರಿಸಿದ್ದಾನೆ."[6]

*"ನರಪತಿ ಚಿಕದೇವೇಂದ್ರಂ*
*ಕರೆದೊಲ್ಮೆಯೊಳೊರ್ಮೆ ತಿರುಮಲಾರ್ಯನೊಳೊರೆದಂ*
*ನಿರವಿಸು ನೀಂ ಕಬ್ಬದ ನುಡಿ*
*ವುರುಳ್ಗಳೊಳ್ದೊಡವಿನಿರವನೆಂದಪ್ರತಿಮಂ"* (ಅ.ವೀ.ಚ. 1–12)

*"ತನ್ನ ಸಿರಿ ತನ್ನ ಸೇವಂ*
*ತನ್ನೊಳ್ಗೆಳೆ ತನ್ನ ಭಾಗ್ಯಮೀಂ ಚಿಕದೇವೇ*
*ನ್ದ್ರನ್ನೇಮವಿತ್ತನೆಂದೊಲ*
*ವಿನ್ನಿರವಿಸಿ ತಿರುಮಲಾರ್ಯನುನ್ನತಿವೆತ್ತಂ"* (ಅ.ವೀ.ಚ. 1–13)

*"ಅಕ್ಕರಿಗರೆರ್ದೆಗೆ ಸಂತರ*
*ಮಕ್ಕೆಂದಪ್ರತಿಮವೀರಚರಿತಾಭಿದೆಯಿಂ*
*ಸಕ್ಕದದಿಂ ಲಕ್ಕಣಮಂ*
*ಲಕ್ಕಮನೊಳ್ಗನ್ನಡಂಗಲಿಂ ವಿವರಿಸಿದಂ"* (ಅ.ವೀ.ಚ 1–14)

ತಿರುಮಲಾರ್ಯನು ಲಕ್ಷ್ಯ ಪದ್ಯಗಳಲ್ಲಿ ಚಿಕ್ಕದೇವರಾಜನ ಶೌರ್ಯ, ಔದಾರ್ಯ, ರಸಿಕತೆ ಮುಂತಾದ ಗುಣಗಳ ಪ್ರಶಂಸೆಯ ಜೊತೆಯಲ್ಲಿ ಸಮಕಾಲೀನ ರಾಜಕೀಯತೆಯ ಬಗ್ಗೆಯೂ ಪ್ರತಿಪಾದಿಸಿರುವುದು ವಿಶೇಷವಾಗಿದೆ.

ಚಿಕ್ಕದೇವರಾಯನು ಮೈಸೂರು ನಗರಕ್ಕೆ ಬಹುಮುಖ್ಯವಾಗಿ ಶಾಂತಿ ನೆಮ್ಮದಿಯನ್ನು ಒದಗಿಸಿರುವಂತಹ ಒಡೆಯ ಇವನು ಪ್ರಾಂತ್ಯವನ್ನು ವಿಸ್ತರಿಸಿ ಅನೇಕ ಯುದ್ದಗಳಲ್ಲಿ ಜಯಶಾಲಿಯಾಗಿ ಜನರಲ್ಲಿ ಧೈರ್ಯ, ಕೆಚ್ಚು, ದೇಶಭಕ್ತಿಯನ್ನು ಇಮ್ಮಡಿಗೊಳಿಸಿರುವನು. ಚಿಕ್ಕದೇವರಾಯನು ಸ್ವತಃ ಕವಿಯೂ ಕಾವ್ಯ ಕರ್ತೃ ಆಗಿರುವುದಲ್ಲದೆ ಕವಿಜನಾಶ್ರಯನು ಆಗಿದ್ದನು. ಇವನ ಕಾಲದಲ್ಲಿ ತಿರುಮಲಾರ್ಯ, ಸಿಂಗರಾರ್ಯ, ಚಿಕುಪಾಧ್ಯಾಯ, ತಿಮ್ಮಣ್ಣ ಕವಿ, ಮಲ್ಲಿಕಾರ್ಜುನ, ವೇಣುಗೋಪಾಲ, ವರಪ್ರಸಾದ, ಚಿದಾನಂದ, ಮಲ್ಲರಸ, ಶೃಂಗಾರಮ್ಮ, ಹೊನ್ನಮ್ಮ ಈ ವಿದ್ವಾಂಸರು ಚಿಕ್ಕದೇವರಾಯನಲ್ಲಿ ಆಶ್ರಿತರಾಗಿದ್ದರು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ತಿರುಮಲಾರ್ಯನು ಆದಿಕವಿಯಾದ ಪಂಪ ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿರುವನು. ಯಾವುದೆಂದರೆ ತಾನು ಬರೆದಂತಹ ಕೃತಿಗಳಿಗೆ ಆಶ್ರಯದಾತನನ್ನು ನಾಯಕನನ್ನಾಗಿ ಮಾಡಿಕೊಂಡು ಅವರನ್ನು ಚಾರಿತ್ರಿಕವಾಗಿ ಉಳಿಯುವಂತೆ ಮಾಡಿರುವನು. ಇವನು ಅಷ್ಟೇ ಅಲ್ಲದೆ ಪಂಪನನ್ನು ಇಪ್ಪತ್ತನೆಯ ಶತಮಾನದವರೆಗೆ ಬಹುಪಾಲು ಕವಿಗಳು ಅನುಸರಿಸಿರುವರು. ಇಲ್ಲಿ ಮುಖ್ಯವಾದ ಸಂಗತಿ ಎಂದರೆ ಚಂಪೂ, ಗದ್ಯ ಅದಲ್ಲದೇ ಶಾಸ್ತ್ರೀಯ ಗ್ರಂಥಗಳಲ್ಲಿಯು ಸಹ ಆಶ್ರಯದಾತನನ್ನು ನಾಯಕನನ್ನಾಗಿ ಮಾಡಿಕೊಂಡು ತಿರುಮಲಾರ್ಯ ವರ್ಣಿಸಿರುವನು.

ಈ ಗ್ರಂಥದ ವೈಶಿಷ್ಟ್ಯ ಏನೆಂದರೆ ಎಲ್ಲವೂ ಅಲಂಕಾರ ದೃಷ್ಟಿಯಿಂದ ಹೇಳುವಂತಹ ಪ್ರಕರಣಗಳಾದರು ಸಹ ಪ್ರತಿಯೊಂದು ಪ್ರಕರಣಕ್ಕೂ ಬೇಕಾದಂತಹ ಲಕ್ಷ್ಯ ಪದ್ಯಗಳನ್ನು ತಿರುಮಲಾರ್ಯ ತನ್ನ ಆಶ್ರಯದಾತನನ್ನು ಹೊಗಳುವ ಇಚ್ಛೆಯಿಂದ ಚಿಕ್ಕದೇವರಾಯನಿಗೆ ಸಂಬಂಧಿಸಿದಂತೆ ಹಲವಾರು ಪದ್ಯಗಳನ್ನು ಉದಾಹರಣೆಯ ಮೂಲಕ ತನ್ನ ಕೃತಿಯಲ್ಲಿ ವಿವರಿಸಿರುವನು. ಇದು ಅಲಂಕಾರ ಗ್ರಂಥವು ಹೌದು ಹಾಗೂ ಇತಿಹಾಸ ಕಾವ್ಯವು ಹೌದು ಎನ್ನುವುದನ್ನು ಗಮನಿಸಬೇಕು. ಶಾಸ್ತ್ರೀಯ ವಿಷಯ ಇತಿಹಾಸವನ್ನು ಬೆರೆಸುವ ಸಂಪ್ರದಾಯವನ್ನು ವ್ಯವಸ್ಥಿತವಾಗಿ ನಿರೂಪಿಸಿದ ಕವಿಯಾಗಿ ನಮಗೆ ತಿರುಮಲಾರ್ಯನು ಕಾಣಿಸಿಕೊಂಡಿರುವನು.

**ಕೊನೆಟಿಪ್ಪಣಿಗಳು**

1. ಕೊಣನೂರು ಶಾಸ್ತ್ರಿ, ಶ್ರೀನಿವಾಸಯ್ಯಂಗಾರ್. *ತಿರುಮಲಾರ್ಯ ವಿರಚಿತ ಅಪ್ರತಿಮವೀರ ಚರಿತ್ರೆ.* ಪು. vii
2. ಸೂರ್ಯನಾಥಕಾಮತ್. *ತಿರುಮಲಾರ್ಯ.* ಪುಟ.35
3. ಸೀತಾರಾಮಯ್ಯ ಎಂ.ವಿ. *ಶಾಸ್ತ್ರಸಾಹಿತ್ಯ.* ಪುಟ.35
4. ಸೂರ್ಯನಾಥಕಾಮತ್. *ಪೂರ್ವೋಕ್ತ.* ಪುಟ.35
5. ಕೊಣನೂರು ಶಾಸ್ತ್ರಿ, ಪೂರ್ವೋಕ್ತ. ಪುಟ. 36
6. ಕೃಷ್ಣಮೂರ್ತಿ ಕೆ., ಕನ್ನಡದಲ್ಲಿ ಕಾವ್ಯ ತತ್ವ, ಪು. 56